ಅಸಲು ದಾವಾ ಸಂಖ್ಯೆ - 288/2015
ಪಿಡಬ್ಲ್ಯೂ - 01
ದಿನಾಂಕಃ 12-03-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ. 4 ಮತ್ತು ಅವರ ಪರ ವಕೀಲರನ್ನು ಕರೆಯಿಸಲಾಯಿತು. ಅವರು ಗೈರು ಹಾಜರು ಇರುತ್ತಾರೆ. ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಸಂಖ್ಯೆ 1, 5 ಮತ್ತು 6 ರ ಪರ ಶ್ರೀ ಕೆ ಸಿ ಪಿ ವಕೀಲರು ಎಸ್ ಟಿ ಪಿ ಪರ ವಕೀಲರಿಂದ.

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಎಲ್ಲ ದಾಖಲೆಗಳನ್ನು ನಾನು ನೋಡಿ ದಾವೆಯನ್ನು ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಪ್ರತಿವಾದಿ ಸಂಖ್ಯೆ 1, 5 ಮತ್ತು 6 ರವರು ಹಾಜರಾದ ನಂತರ ಅವರು ಸಲ್ಲಿಸಿದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ34/1985 ದಾವೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಸಲು ದಾವೆ ಸಂಖ್ಯೆ34/1985 ರಲ್ಲಿ ಆದ ರಾಜಿಯ ಕಾಗದ ಪತ್ರವನ್ನು ನಾನು ನೋಡಿಕೊಂಡಿರುತ್ತೇನೆ

ರಿ.ಸ ನಂ. 7/5 ರಲ್ಲಿ ಇರುವ 23 ಗುಂಟೆಯು ಅಸಲು ದಾವೆ ಸಂಖ್ಯೆ 34/1985 ರಲ್ಲಿ ಇರುವ 1 ನೇ ಪ್ರತಿವಾದಿಗೆ ಬಂದಿರುತ್ತದೆ. ರಿ.ಸ ನಂ. 7/5 ರಲ್ಲಿ ಇರುವ 23 ಗುಂಟೆಯ ಆಸ್ತಿಯನ್ನು ದಾವಾ ಆಸ್ತಿಯನ್ನಾಗಿ ಈ ದಾವೆಯಲ್ಲಿ ತೋರಿಸಿರುವುದಿಲ್ಲ. ರಿ.ಸ ನಂ. 63/5 ಮತ್ತು 63/8 ರ ಆಸ್ತಿಗಳು ಅಸಲು ದಾವಾ ಸಂಖ್ಯೆ 34/1985 ರಲ್ಲಿ ಇರುವ ಮತ್ತು ಈ ದಾವೆಯಲ್ಲಿ ಇರುವ 1 ರಿಂದ 4 ಪ್ರತಿವಾದಿಯರಿಗೆ ಜಂಟಿಯಾಗಿ ಬಂದಿರುತ್ತದೆ ಎಂದರೆ ರಾಜಿ ಅರ್ಜಿ ಓದಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 2015 ನೇ ನವೆಂಬರ ತಿಂಗಳಲ್ಲಿ ನಾನು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಸಾಕ್ಷಿಯು ಮುಂದುವರೆದು ರಾಜಿ ಅರ್ಜಿಯನ್ನು 2017 ನೇ ಇಸ್ವಿಯಲ್ಲಿ ರಾಜಿ ಡಿಕ್ರಿಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. 2015 ನೇ ಇಸ್ವಿಯಲ್ಲಿ ನಾನು ಪಹಣಿ ಪತ್ರಿಕೆಯನ್ನು ತೆಗೆದು ನೋಡಿದ ಸಮಯದಲ್ಲಿ ನನ್ನ ತಂದೆಗೆ 23 ಗುಂಟೆ ಜಮೀನು, 1 ನೇ ಪ್ರತಿವಾದಿಗೆ ಜಮೀನು, 6 ನೇ ಪ್ರತಿವಾದಿಗೆ ಮನೆ ಬಂದಿತ್ತು. 5 ನೇ ಪ್ರತಿವಾದಿಗೆ ಜಮೀನು ಬಂದಿತ್ತು. ರಿ.ಸ ನಂ.63/8 ರಲ್ಲಿ ಇರುವ 3 ಎಕರೆ 29 ಗುಂಟೆ ಜಮೀನು 5 ನೇ ಪ್ರತಿವಾದಿಗೆ ಬಂದಿತ್ತು. ಉಳಿದ ಜಮೀನುಗಳು 1 ನೇ ಪ್ರತಿವಾದಿಗೆ ಹಾಗೂ 6 ನೇ ಪ್ರತಿವಾದಿಗೆ ಮನೆ ಬಂದಿರುತ್ತದೆ.

ನನ್ನ ತಂದೆಯ ಹಾಗೂ 1, 5, ಮತ್ತು 6 ನೇ ಪ್ರತಿವಾದಿಯ ಹೆಸರುಗಳು ದಾವಾ ಆಸ್ತಿಗೆ ಹೇಗೆ ದಾಖಲಾಗಿರುತ್ತವೆ ಎಂದು ನಾನು ಕಾಗದ ಪತ್ರಗಳನ್ನು ತೆಗೆದು ನೋಡಿರುತ್ತೇನೆ 1993-94 ರಲ್ಲಿ ರಾಜಿ ಡಿಕ್ರಿಯ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಹೆಸರುಗಳು ದಾಖಲಾಗಿದ್ದವು ಎಂದರೆ ಸರಿ. ಡ ಉತಾರಗಳನ್ನು ತೆಗೆಸಿ ನೋಡಲು ನನಗೇನು ತೊಂದರೆ ಇರಲಿಲ್ಲ ಎಂದರೆ ಸರಿ. ರಾಜಿ ಡಿಕ್ರಿಯ ಆದೇಶದ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಹೆಸರುಗಳು ದಾಖಲಾಗಿರುವ ವಿಷಯ ನನಗೆ ಗೊತ್ತಿದ್ದ ಕಾರಣ ನಾನು ಡ ಉತಾರಗಳನ್ನು ತೆಗೆಯಿಸಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ರಾಜಿ ಡಿಕ್ರಿಯ ಪ್ರಕಾರ ಪ್ರತಿವಾದಿ ಸಂಖ್ಯೆ 1 ರಿಂದ 4 ರವರ ಹೆಸರುಗಳು ದಾಖಲು ಆಗಿರುತ್ತವೆ ಎಂದರೆ ಸರಿ.

2013 ನೇ ಇಸ್ವಿಯಲ್ಲಿ ನನ್ನ ತಂದೆಯವರು ಮೃತಪಟ್ಟಿರುತ್ತಾರೆ. ನಮ್ಮ ತಂದೆಯವರು ಜೀವಿತಾವಧಿಯಲ್ಲಿ 1 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ದಾವಾ ಆಸ್ತಿಗಳಿಗೆ ದಾಖಲಾಗಿರುವುದರ ಕುರಿತು ಪ್ರಶ್ನಿಸಿದ್ದರೋ ಅಥವಾ ಇಲ್ಲವೊ ಎಂಬ ವಿಷಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಸಲು ದಾವಾ ಸಂಖ್ಯೆ 34/1985 ರಲ್ಲಿ ಆದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ನಾನು ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ತಂದೆಯವರು ಕೂಡ ಮೇಲ್ಮನವಿಯನ್ನು ಮಾಡಿದ್ದರೋ ಅಥವಾ ಇಲ್ಲವೊ ಎಂದು ನನಗೆ ಗೊತ್ತಿರುವುದಿಲ್ಲ. ಸರ್ಕಾರಿ ದಾಖಲೆಗಳನ್ನು ಹಾಗೂ ನನ್ನ ಮನೆಯಲ್ಲಿ ಇರುವ ದಾಖಲೆಗಳನ್ನು ನಾನು ನೋಡಿರುತ್ತೇನೆ ಎಂದರೆ ಸರಿ.

ಪ್ರತಿವಾದಿ ಸಂಖ್ಯೆ 1 ರಿಂದ 4 ರವರ ನಡುವೆ 1997 ರಲ್ಲಿ ಹಿಸ್ಸೆಗಳು ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಸಲು ದಾವಾ ಸಂಖ್ಯೆ 34/1985 ರಲ್ಲಿ ಆದ ರಾಜಿ ಡಿಕ್ರಿಯ ಪ್ರಕಾರ ನನಗೆ ಹಿಸ್ಸೆ ಬಂದಿಲ್ಲ ಎಂದರೆ ಸರಿ. 1997 ನೇ ಇಸ್ವಿಯಲ್ಲಿ ರಿ.ಸ ನಂ. 63/5 ರ ಜಮೀನಿಗೆ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುವ ವಿಷಯ ಈಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಒಂದು ಆಸ್ತಿಯನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಮಾರಾಟ ಮಾಡಿದ ಆಸ್ತಿಗೋಸ್ಕರ ನಾನು ಪರಿಹಾರವನ್ನು ಕೇಳಿರುತ್ತೇನೆ. 1997 ನೇ ಇಸ್ವಿಯಲ್ಲಿ ಖರೀದಿ ಕಾಗದ ಪತ್ರ ಆಗಿರುತ್ತದೆ ಎಂದರ ಸರಿ. ನಾನು ಪಹಣಿ ಪತ್ರಿಕೆಯನ್ನು ತೆಗೆಸಿ ನೋಡಿದಾಗ 5 ನೇ ಪ್ರತಿವಾದಿಯ ಹೆಸರು ಇತ್ತು ಎಂದರೆ ಸರಿ. ಈಗಲೂ ಕೂಡ 5 ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲು ಇರುತ್ತದೆ ಎಂದರೆ ಸರಿ.

ನನ್ನ ಗಂಡನ ಮನೆಯ ಹಿತ್ತಲ ಜಾಗ ಹಾಗೂ ಜಮೀನುಗಳನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನ ಮನೆಯ ಅಕ್ಕಪಕ್ಕದವರು ಸ್ಥಿರಾಸ್ಥಿಗಳನ್ನು ಮಾರಾಟ ಮಾಡಿರುವ ವಿಷಯ ಗೊತ್ತಿರುತ್ತದೆ. ನನ್ನ ಮಾವನವರು ಹಿತ್ತಲವನ್ನು ಖರೀದಿಗೆ ಹಿಡಿದಿರುತ್ತಾರೆ. ನನ್ನ ಮಾವನಿಗೆ ಹಿತ್ತಲಿನ ಕಬ್ಜಾವನ್ನು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮಾವನವರು ಖರೀದಿಗೆ ಹಿಡಿದ ಆಸ್ತಿಯನ್ನು ನಾನು ನೋಡಿರುತ್ತೇನೆ. ನಮ್ಮ ಮಾವನವರು ಖರೀದಿಗೆ ಹಿಡಿದ ಆಸ್ತಿಯನ್ನು ನಾವು ಉಪಯೋಗಿಸುತ್ತೇವೆ. ನಮ್ಮ ಮಾವನವರು ಖರೀದಿಗೆ ಹಿಡಿದ ಆಸ್ತಿಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾನೆ ಎಂದರೆ ಸರಿ. ಸಾಮಾನ್ಯವಾಗಿ ಖರೀದಿಗೆ ಹಿಡಿದ ಸ್ಥಿರಾಸ್ತಿಯ ಕಬ್ಜೆಯನ್ನು ಕೊಡುವುದು ಇರುತ್ತದೆ ಎಂದರೆ ಸರಿ. 1997 ನೇ ಇಸ್ವಿಯಲ್ಲಿ 5 ನೇ ಪ್ರತಿವಾದಿಯು ರಿ.ಸ ನಂ.63/8 ರಲ್ಲಿ ಇರುವ 3

ಎಕರೆ 29 ಗುಂಟೆ ಜಮೀನನ್ನು ಖರೀದಿಗೆ ಪಡೆದು ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸರಿ. ಖರೀದಿ ಕಾಗದ ಪತ್ರದ ಪ್ರಕಾರ 5 ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲು ಆಗಿರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಯು ರಿ.ಸ ನಂ. 63/8 ರಲ್ಲಿರುವ 3 ಎಕರೆ 29 ಗುಂಟೆ ಜಮೀನನ್ನು ಉಳುಮೆ ಮಾಡುತ್ತಿರುವ ವಿಷಯ ನನಗೆ ಈಗ ಗೊತ್ತಾಗಿರುತ್ತದೆ. 5 ನೇ ಪ್ರತಿವಾದಿಯು ರಿ.ಸ ನಂ. 63/8 ರಲ್ಲಿ ಇರುವ 3 ಎಕರೆ 29 ಗುಂಟೆ ಜಮೀನಿನ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿ.

ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 92/1 ಇದು ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿ. ವಿ ಪಿ ಸಿ ನಂ. 92/1 ರಲ್ಲಿ ಕಮಲವ್ವನ ಹೆಸರಿನಲ್ಲಿ ಮನೆ ಇರುತ್ತದೆ. ವಿ ಪಿ ಸಿ ನಂ. 92/1 ನಾಯಿಕೆರೂರ ಗ್ರಾಮದಲ್ಲಿ ಇರುತ್ತದೆ. ಬಸವ ಯೋಜನೆ ಅಡಿಯಲ್ಲಿ ಕಮಲವ್ವ ಇವರಿಗೆ ಮನೆಯು ಮಂಜೂರಾಗಿ ವಿ ಪಿ ಸಿ ನಂ. 92/1 ರಲ್ಲಿ ಕಮಲವ್ವ ಮನೆ ಕಟ್ಟಿರುತ್ತಾಳೆ ಎಂದರೆ ನಮ್ಮ ತಂದೆಯವರ ಕಾಲದಲ್ಲಿ ಈ ಮನೆ ಇತ್ತು ಎಂದು ನುಡಿಯುತ್ತಾರೆ. ವಿ ಪಿ ಸಿ ನಂ. 92/1 ಕ್ಕೆ ನಮ್ಮ ತಂದೆಯವರ ಹೆಸರು ದಾಖಲು ಇದ್ದ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ ಮತ್ತು ದಾಖಲೆಯು ಕೂಡ ಇರುವುದಿಲ್ಲ.

2011 ನೇ ಇಸ್ವಿಯಲ್ಲಿ ಕಮಲವ್ವ ಇವರಿಗೆ ಬಸವ ವಸತಿ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿ ಕಮಲವ್ವ ಇವಳು ಮನೆಯನ್ನು ಕಟ್ಟಿ ಸರ್ಕಾರಕ್ಕೆ ಅಡಮಾನ ಇಟ್ಟಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ವಿ ಪಿ ಸಿ ಸಂಖ್ಯೆ 92/1 ರಲ್ಲಿ ಇರುವ ಮನೆಯನ್ನು ಕಟ್ಟಲು ನಾನು ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. 2 ಮತ್ತು 4 ನೇ ಪ್ರತಿವಾದಿಯರ ಮಧ್ಯ ನನ್ನ ಸಂಬಂಧ ಚೆನ್ನಾಗಿ ಇರುತ್ತದೆ. 2 ಮತ್ತು 4 ನೇ ಪ್ರತಿವಾದಿಯರು ಹೇಳಿದ ಮಾತನ್ನು ನಾನು ಕೇಳುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 4 ನೇ ಪ್ರತಿವಾದಿಯರ ಪ್ರಚೋದನೆಯ ಮೇರೆಗೆ ಈ ಪ್ರಸ್ತುತ ದಾವೆಯನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಯಾವುದೇ ಹಿಸ್ಸೆಯನ್ನು ಹೊಂದದಿದ್ದರು ಕೂಡ 2 ಮತ್ತು 4 ನೇ ಪ್ರತಿವಾದಿಯರ ಮಾತನ್ನು ಕೇಳಿ ನಾನು ಈ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳ ಸಾಮೂಹಿಕ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.